## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1033/2016/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:[illegible].4.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಹೊಸಕೋಟೆ ಪುರಸಭೆಯ ವೆಚ್ಚಗಳಲ್ಲಿ ನ್ಯೂನ್ಯತೆ ಕಂಡುಬಂದಿದ್ದು, ಎಷ್ಟು ಮೊತ್ತವು ದುರುಪಯೋಗವಾಗಿದೆ ಎನ್ನುವ ಬಗ್ಗೆ ಇಲಾಖೆಯ ಲೆಕ್ಕಾಧಿಕಾರಿಗಳಿಂದ ಪರಿಶೀಲಿಸಿ ಒಂದು ವೇಳೆ ಅಲ್ಲಿ ಹಣ ದುರುಪಯೋಗವಾಗಿದ್ದರೆ, ಅದನ್ನು ಎದುರುದಾರರಿಂದ ಭರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಸುರೇಶ್.ಜಿ. ಕುಂಬಾರಪೇಟೆ, ಹೊಸಕೋಟೆಯ ನಿವಾಸಿ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀಮತಿ ಅಂಬಿಕಾ, ಮುಖ್ಯಾಧಿಕಾರಿಗಳು, (2) ಶ್ರೀ ಆನಂದ್ ಕಳ್ಳೋಲ್ಕರ್, ಮುಖ್ಯಾಧಿಕಾರಿಗಳು, ಹಾಗೂ ಶ್ರೀ (3) ರವಿಕುಮಾರ್, ಪರಿಸರ ಅಭಿಯಂತರು, ಪುರಸಭೆ, ಹೊಸಕೋಟೆ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1 ರಿಂದ 3ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಪುರಸಭೆಯಿಂದ ಪಟ್ಟಣದ 23 ವಾರ್ಡುಗಳಿಗೆ ಬೀದಿದೀಪ ಅಳವಡಿಕೆ ಮತ್ತು ನಿರ್ವಹಣೆಗೆ ಟೆಂಡರ್ ಕರೆಯಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್‌ಟೆಂಡರ್‌ನಲ್ಲಿ ಭಾಗವಹಿಸಿದ್ದು, ಕಡಿಮೆ ದರ ನಮೂದಿಸಿರುವ ಎಲ್.1 ಗುತ್ತಿಗೆದಾರರಿಗೆ ಈ ವರೆಗೆ ಕಾರ್ಯಾದೇಶ ನೀಡಿರುವುದಿಲ್ಲ. ಇದರಿಂದ ಪುರಸಭೆಗೆ ಪ್ರತಿತಿಂಗಳು ರೂ.32,769/-ರಂತೆ 12 ತಿಂಗಳಿಗೆ 3,93,228/- ರೂ.ಗಳ ನಷ್ಟ ಉಂಟಾಗಿರುತ್ತದೆ. ಇದಕ್ಕೆ ಎದುರುದಾರರ ಬೇಜವಾಬ್ದಾರಿತನ ಕಾರಣವಾಗಿರುತ್ತದೆ. 2013-14ನೇ ಸಾಲಿನ ಖರ್ಚಿನ ವಿವರದಲ್ಲಿ ನಮೂದಿಸಿರುವಂತೆ ನೀರಿನ ಪೈಪ್‌ಲೈನ್‌ಗಳ ರಿಪೇರಿ ಮತ್ತು ದುರಸ್ತಿ ಮೊತ್ತ ರೂ. 30,63,145/- ಗಳಷ್ಟು ವೆಚ್ಚ ಮಾಡಿರುತ್ತಾರೆ. ಆದರೆ ಇದಕ್ಕೆ ಯಾವುದೇ ಟೆಂಡರ್ ಕರೆದಿರುವುದಿಲ್ಲ. 2011 ಜನವರಿಯಿಂದ 2014 ನವೆಂಬರ್‌ವರೆಗೆ

ಎಂ.ಕೆ.ಏಜೆನ್ಸಿ ಅವರಿಗೆ ಗುತ್ತಿಗೆ ಆಧಾರದ ಮೇಲೆ ಕಸ ವಿಲೇವಾರಿ ಮಾಡಿರುತ್ತಾರೆ. ಆದರೆ ಕೂಲಿ ಕಾರ್ಮಿಕರಿಗೆ ಭವಿಷ್ಯನಿಧಿ ಹಣ ನೀಡಿರುವುದಿಲ್ಲ. ಸ್ವಯಂ ಘೋಷಿತ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಖಾತೆದಾರರ ವಾರ್ಷಿಕ ಕಂದಾಯದ ಬಗ್ಗೆ ಯಾವುದೇ ತರಹದ ಮಾಹಿತಿಯನ್ನು ನಮೂದಿಸಲು ಪುಸ್ತಕವನ್ನು ಇಟ್ಟಿರುವುದಿಲ್ಲ. ಇದರಿಂದ ಬೊಕ್ಕಸಕ್ಕೆ ನಷ್ಟವುಂಟಾಗಿದ್ದು, ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಬೀದಿ ಕಸ ಗುಡಿಸುವ ಕಾಮಗಾರಿಯನ್ನು ಗುತ್ತಿಗೆದಾರರಾದ ಎಂ.ಕೆ.ಎಂಟರ್ ಪ್ರೈಸಸ್ ಅವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಇವರು ಹೊರಗುತ್ತಿಗೆ ನೌಕರರ ಸೇವೆಯನ್ನು ಪೂರೈಸಿ ಪ್ರತಿ ತಿಂಗಳು ಪುರಸಭೆಯಿಂದ ಗುತ್ತಿಗೆ ಹಣ ಪಡೆದಿರುತ್ತಾರೆ. ಈ ಗುತ್ತಿಗೆ ಹಣದಲ್ಲಿ ನೌಕರರಿಗೆ ಪಾವತಿಸಬೇಕಾದ ವೇತನದಲ್ಲಿ ನಿಗಧಿಯ ಪಿ.ಎಫ್ ಹಣವನ್ನು ಕಟಾಯಿಸಿ ಸಂಬಂಧಪಟ್ಟ ಸಂಸ್ಥೆಗೆ ಪಾವತಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಪಿ. ಎಫ್.ಹಣವನ್ನು ಪಾವತಿಸದಿರುವುದು ತನ್ನ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ.7.7.2015ರಂದು ಹೊಸಕೋಟೆ ನಗರಸಭೆಯಿಂದ ವರ್ಗಾವಣೆಗೊಂಡಿರುವುದರಿಂದ ಈ ದೂರಿಗೆ ಸಂಬಂಧಿಸಿದಂತೆ ಹೊಸಕೋಟೆ ನಗರಸಭೆಯ ಪೌರಾಯುಕ್ತರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪರಿಸರ ಅಭಿಯಂತರು, ಕಿರಿಯ ಅಭಿಯಂತರು ಹಾಗೂ ಆರೋಗ್ಯ ನಿರೀಕ್ಷಕರುಗಳು ಮಾಹಿತಿ ನೀಡಬೇಕಿದ್ದು, ತನ್ನನ್ನು ಪ್ರಕರಣದಿಂದ ಕೈಬಿಡಬೇಕೆಂದು ವಿನಂತಿಸಿರುತ್ತಾರೆ.

5. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎಂ.ಕೆ.ಎಂಟರ್‌ಪ್ರೈಸಸ್ ರವರಿಗೆ ಮೊದಲನೇ ಬಿಲ್ ಪಾವತಿಸಿದ ನಂತರ 2ನೇ ಬಿಲ್ಲನ್ನು ಪಿ.ಎಫ್.ಕಟ್ಟಿದ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸಬೇಕಾಗಿದ್ದು ಎದುರುದಾರರ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಎದುರುದಾರರ ವಿರುದ್ದ ಸೂಕ್ತಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

6. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಹೊಸಕೋಟೆ

ಪುರಸಭೆಯಲ್ಲಿ ಸಾಕಷ್ಟು ಅವ್ಯವಹಾರಗಳು, ಅಕ್ರಮಗಳು ಜರುಗಿವೆಯೆಂದು ದೂರಿನಲ್ಲಿ ನಮೂದಿಸಲಾಗಿರುತ್ತದೆ. ಅವುಗಳು ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ದಿನಾಂಕ ಮತ್ತು ವಿಷಯ | ಬಿಲ್ ಮೊತ್ತ | ಚೆಕ್ ನಂ. | ಷರಾ |
|---|---|---|---|---|
| 1 | 9.6.2014<br>ಜಾತ್ರಾಮಹೋತ್ಸವದ ಪ್ರಯುಕ್ತ ದೀಪಾಲಂಕಾರ | 83,566.–00 | 552240 | ಪಾವತಿಯಾಗಿರುತ್ತದೆ |
| 2 | ಮಾರ್ಚ್ 2014<br>ಬೋರ್‌ವೆಲ್ ರಿಪೇರಿಗೆ ಗುತ್ತಿಗೆ ನೀಡಿದ್ದು | – | – | ಗುತ್ತಿಗೆದಾರರನ್ನು ಬಿಟ್ಟು ಬೇರೆ ಗುತ್ತಿಗೆದಾರರಿಗೆ ಬಿಲ್ ನೀಡಿರುತ್ತಾರೆ. |
| 3 | 21.6.2014<br>ದೊಡ್ಡ ಅಮಾನಿಕೆರೆ ಅಂಗಳದಲ್ಲಿ ಬಿದ್ದು ಹೋಗಿದ್ದ ಮೋಟಾರನ್ನು ಮೇಲಕ್ಕೆ ಎತ್ತಿರುವುದು | 39,600–00 | 651760 | ಪಾವತಿಯಾಗಿರುತ್ತದೆ |
| 4 | 23.6.2014<br>ಬೋರ್‌ವೆಲ್ ರಿಪೇರಿ | 37,620–00 | 651761 | ಪಾವತಿಯಾಗಿರುತ್ತದೆ |
| 5 | 23.6.2014<br>ಬೋರ್‌ವೆಲ್ ರಿಪೇರಿ | 9,405–00 | 651762 | ಪಾವತಿಯಾಗಿರುತ್ತದೆ |
| 6 | 26.6.2014<br>ಜೆಸಿಬಿ ಹಾಗೂ ಟ್ರಾಕ್ಟರ್ ಬಿಲ್ | 1,85,955–00 | 552256 | ಪಾವತಿಯಾಗಿರುತ್ತದೆ |
| 7 | 24.7.2014<br>ಬೋರ್ ವವಲ್ ರಿಪೇರಿ | 1,61,075–00 | 651768 | ಪಾವತಿಯಾಗಿರುತ್ತದೆ |
| 8 | 6.8.2014<br>ಡಂಪರ್ ಪ್ಲಸ್ ನಿರ್ವಹಣೆ | 1,60,050–00 | 552299 | ಪಾವತಿಯಾಗಿರುತ್ತದೆ |

7. ಈ ಮೇಲಿನ ಕ್ರಮಸಂಖ್ಯೆ 1 ರಿಂದ 5 ಮತ್ತು 7 ಬೋರ್ ವೆಲ್ ರಿಪೇರಿಗಾಗಿ ನಿಸರ್ಗ ಎಂಟರ್ ಪ್ರೈಸಸ್‌ರವರನ್ನು ಗುತ್ತಿಗೆದಾರರನ್ನಾಗಿ ನೇಮಿಸಿದ್ದರೂ ಸಹಾ ಅವರನ್ನು ಬಿಟ್ಟು ಬೇರೆಯವರಿಗೆ ಹೆಚ್ಚು ಬಿಲ್ ಪಾವತಿಸಿರುತ್ತಾರೆ.

8. ಕ್ರಮಸಂಖ್ಯೆ 6 ಜೆಸಿಬಿ ಹಾಗೂ ಟ್ರಾಕ್ಟರ್ ಬಿಲ್ಲನ್ನು ಖರ್ಚು ಮಾಡಿರುವುದಾಗಿ ಅಜೆಂಡಾದಲ್ಲಿ ತೋರಿಸಿರುತ್ತಾರೆ. ಆದರೆ ಇಷ್ಟು ಮೊತ್ತವನ್ನು ಟೆಂಡರ್ ಕರೆಯದೆ ಬಿಲ್ ಪಾವತಿ ಮಾಡಿರುತ್ತಾರೆ.

9. ಕ್ರಮಸಂಖ್ಯೆ 8 ರಲ್ಲಿ ಡಂಪರ್ ಪ್ಲಸ್ ನಿರ್ವಹಣೆ ವಾಹನ ಸಂ.ಕೆ.ಎ.53 7201 ವಾಹನಕ್ಕೆ 1,61,075–00 ರೂ.ಗಳಷ್ಟು ಬಿಲ್ ಪಾವತಿಸಿರುವುದಾಗಿ ಅಜೆಂಡಾದಲ್ಲಿ ತೋರಿಸಿದ್ದು, ಆದರೆ ಈ ವಾಹನ

2 ವರ್ಷಗಳಿಂದ ನಿಂತ ಜಾಗದಲ್ಲಿಯೇ ನಿಂತಿರುತ್ತದೆ. ಆದರೆ ಇದಕ್ಕೆ ಡೀಸಲ್ ಖರ್ಚು ಸಹ ಪಾವತಿಸಿರುತ್ತಾರೆ.

10. ಸಕಿಂಗ್ ಮಿಷನ್ ಯಂತ್ರದ ಬಾಡಿಗೆ ಜೂನ್ 2014ರಲ್ಲಿ ರೂ.1000/-, ಜುಲೈ 2014ರಲ್ಲಿ ರೂ.500/-, ಆಗಿದ್ದು, ಆದರೆ ಆಗಸ್ಟ್ ನಲ್ಲಿ ಜಮಾ ಆಗಿರುವುದಿಲ್ಲ. ಆದರೆ ಇದಕ್ಕೆ ಎಷ್ಟು ಡೀಸಲ್ ಬಿಲ್ ಮಾಡಿದ್ದಾರೆ, ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ.

11. ಕಟ್ಟಡ ಪರವಾನಿಗೆ ಶುಲ್ಕ ಜೂನ್ 2014ರಲ್ಲಿ ರೂ.3,374/-, ಜುಲೈ 2014ರಲ್ಲಿ ರೂ. 22,475/-, ಆದರೆ ಆಗಸ್ಟ್ 2014ರಲ್ಲಿ ಜಮಾ ಆಗಿರುವುದಿಲ್ಲ. ಇದರಲ್ಲಿ ನ್ಯೂನ್ಯತೆಗಳು ಇರುತ್ತವೆ.

12. ನೀರಿನ ಶುಲ್ಕ ಜೂನ್ 2014ರಲ್ಲಿ ರೂ.22,070/-, ಜುಲೈ 2014ರಲ್ಲಿ ರೂ.14,150/-, ಆದರೆ ಆಗಸ್ಟ್ 2014ರಲ್ಲಿ ಶುಲ್ಕ ಜಮಾ ಆಗಿರುವುದಿಲ್ಲ. ಇದರಲ್ಲಿ ಅಕ್ರಮವೆಸಗಿ ಪುರಸಭೆಗೆ ನಷ್ಟವುಂಟುಮಾಡಿರುತ್ತಾರೆ.

13. 2013-14ನೇ ಸಾಲಿನ ಖರ್ಚಿನ ವಿವರದಲ್ಲಿ ನಮೂದಿಸಿರುವಂತೆ ನೀರಿನ ಪೈಪುಲೈನುಗಳು ರಿಪೇರಿ ಮತ್ತು ದುರಸ್ತಿ ಮೊತ್ತ ರೂ.30,63,145/- ಗಳನ್ನು ವೆಚ್ಚ ಮಾಡಿರುತ್ತಾರೆ. ಆದರೆ ಇದಕ್ಕೆ ಯಾವುದೇ ಟೆಂಡರ್ ಕರೆದಿರುವುದಿಲ್ಲ.

14. ಆದ್ದರಿಂದ ಎದುರುದಾರರು ಪುರಸಭೆಯಲ್ಲಿ ತುಂಬಾ ನ್ಯೂನ್ಯತೆಗಳನ್ನು ಎಸಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟುಮಾಡಿರುತ್ತಾರೆಂದು ದೂರುದಾರರು ತಮ್ಮ ದೂರಿನಲ್ಲಿ ಅಂಕಿಅಂಶ ಸಹಿತ ನಮೂದಿಸಿರುತ್ತಾರೆ.

15. ಆದರೆ ಎದುರುದಾರರ ಆಕ್ಷೇಪಣೆಗಳನ್ನು ಗಮನಿಸಲಾಗಿ ಅವರು ದೂರುದಾರರ ಆಪಾದನೆಗಳಿಗೆ ಉತ್ತರಿಸದೆ, 1ನೇ ಎದುರುದಾರರು ಕೇವಲ ಪಿ.ಎಫ್.ಕಟಾವಿನ ಬಗ್ಗೆ ಮಾತ್ರ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. 2ನೇ ಎದುರುದಾರರು ತಾನು ವರ್ಗಾವಣೆಯಾಗಿರುವುದರಿಂದ ಈ ಪ್ರಕರಣ ತನಗೆ ಸಂಬಂಧವಿಲ್ಲವೆನ್ನುವಂತೆ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ. 3ನೇ ಎದುರುದಾರರು 17.10.2016ರಂದು ಈ ಕಛೇರಿಗೆ ಪತ್ರಬರೆದು ಆಕ್ಷೇಪಣೆ ಸಲ್ಲಿಸಲು ತನಗೆ 1 ತಿಂಗಳ ಕಾಲಾವಕಾಶ ನೀಡಬೇಕೆಂದು ಕೋರಿದ್ದು ಆದರೆ ಆ ಅವಧಿ ಮೀರಿದ ನಂತರವೂ ಸಹಾ ಅವರು ಆಕ್ಷೇಪಣೆ ಸಲ್ಲಿಸಿರುವುದಿಲ್ಲ.

16. ದೂರಿನಲ್ಲಿಯ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, 1 ಮತ್ತು 2ನೇ ಎದುರುದಾರರ ಕರ್ತವ್ಯದ ಅವಧಿಯಲ್ಲಿಯೇ ಮೇಲ್ಕಾಣಿಸಿದ ನ್ಯೂನ್ಯತೆಗಳು, ಅಕ್ರಮಗಳು, ಸರ್ಕಾರಿ ಬೊಕ್ಕಸಕ್ಕೆ ನಷ್ಟವುಂಟಾಗಿದ್ದು ಕಂಡುಬರುತ್ತದೆ. ಆದರೆ ಎದುರುದಾರರು ಈ ಬಗ್ಗೆ ತಮ್ಮ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸದೆ ಸರ್ಕಾರಿ ಅನುದಾನವನ್ನು ಹಾಗೂ ಪುರಸಭೆಗೆ ಸಲ್ಲಬೇಕಾದ ಸಾರ್ವಜನಿಕ ಶುಲ್ಕವನ್ನು ಸರಿಯಾಗಿ ವಸೂಲುಮಾಡದೆ, ಲೆಕ್ಕಪತ್ರ ಇಡದೆ, ಟೆಂಡರ್ ಕರೆಯದೆ, ಬೇಕಾಬಿಟ್ಟಿಯಾಗಿ ಹಣಕಾಸಿನ ನಿರ್ವಹಣೆ ಮಾಡಿ ಪುರಸಭೆಗೆ ನಷ್ಟವುಂಟುಮಾಡಿರುವುದು ಸ್ಪಷ್ಟವಾಗುತ್ತದೆ.

17. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಹೊಸಕೋಟೆ ಪುರಸಭೆಯ ಮೇಲ್ಕಾಣಿಸಿದ ವೆಚ್ಚಗಳಲ್ಲಿ ನ್ಯೂನ್ಯತೆ ಕಂಡುಬಂದಿದ್ದು, ಅದರಲ್ಲಿ ಎಷ್ಟು ಮೊತ್ತವು ದುರುಪಯೋಗವಾಗಿದೆ ಎನ್ನುವ ಬಗ್ಗೆ ಇಲಾಖೆಯ ಲೆಕ್ಕಾಧಿಕಾರಿಗಳಿಂದ ಪರಿಶೀಲಿಸಿ ಒಂದು ವೇಳೆ ಅಲ್ಲಿ ಹಣ ದುರುಪಯೋಗವಾಗಿದ್ದರೆ, ಅದನ್ನು ಎದುರುದಾರರಿಂದ ಭರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

18. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**